ಚಕ್ರ, ತಲೆಯ ಹಿಂಭಾಗದಲ್ಲಿ ಗೋಚರವಾಗುವ ಶಿಖೆಯಿಂದ ಶೋಭಿಸುತ್ತಿದ್ದ ಶೇಷಗಿರಿ ಪುರೋಹಿತ, ಪ್ರೊಫೆಸರ್ ಮೈಲಾರಪ್ಪ ವೈಸ್‌ಚಾನ್ಸಲರ್ ಆಗುತ್ತಿದ್ದಂತೆ ಅವುಗಳೆಲ್ಲವುಗಳಿಂದ ವಿಮುಕ್ತನಾಗಿ ಹೊಸ ಚಹರೆ ರೂಪಿಸಿಕೊಂಡಿದ್ದ. ತನ್ನ ಬದಲಾದ ಮುಖಚಹರೆಯಿಂದ ಮೈಲಾರಪ್ಪನವರಿಗೂ ಹತ್ತಿರದವನಾಗಿ ವಿಶ್ವವಿದ್ಯಾಲಯದ ಎಲ್ಲ ಕುಟಿಲ ಕಾರ್ಯಗಳ ಕೇಂದ್ರಬಿಂದುವಾಗಿದ್ದ. ಚಿದಂಬರನಿಗೆ ಕ್ಷಣಕ್ಷಣಕ್ಕೂ ಬದಲಾಗುವ ಶೇಷಗಿರಿಯ ಮನಸ್ಸಿನ ವಾಸನೆಯೇ ಒಂದು ಸೋಜಿಗದ ವಿಷಯವಾಗಿತ್ತು.

ಈ ನಡುವೆ ಚಿದಂಬರನಿಗೆ ಆಫೀಸಿನಲ್ಲಿ ತನ್ನೊಂದಿಗೆ ಕೆಲಸ ಮಾಡುತ್ತಿರುವ ಸಹೋದ್ಯೋಗಿಗಳು ಮೊದಲಿನಂತೆ ಸ್ನೇಹದಿಂದ ವರ್ತಿಸುತ್ತಿಲ್ಲ ಎನ್ನುವ ಗುಮಾನಿ ಮನಸ್ಸಿನಲ್ಲಿ ಮೂಡಿದ್ದೆ ದಿಗಿಲುಗೊಂಡ. ಅಲ್ಲಲ್ಲಿ ಇಬ್ಬಿಬ್ಬರೇ ಜೊತೆಯಾಗಿ ನಿಂತು ಮೇಲುಧ್ವನಿಯಲ್ಲಿ ಮಾತನಾಡುವುದು, ಚಿದಂಬರ ಬರುತ್ತಿರುವ ಸೂಚನೆ ಸಿಕ್ಕಿದ್ದೆ ಮಾತು ನಿಲ್ಲಿಸಿ ಅವನತ್ತ ಅನುಮಾನದಿಂದ ನೋಡುವುದು ಒಟ್ಟಾರೆ ಆಫೀಸಿನ ವಾತಾವರಣ ಈ ಮೊದಲಿನಂತಿಲ್ಲ ಅನಿಸತೊಡಗಿತು. ಅದಕ್ಕೆಲ್ಲ ಚಿದಂಬರನ ವಾಸನೆ ಆಘ್ರಾಣಿಸುವ ಖಯಾಲಿಯೇ ಕಾರಣವಾಗಿತ್ತು. ಹತ್ತಿರ ನಿಂತರೆ ವಾಸನೆ ಹೀರಿ ಯಾವ ಕ್ಷಣಕ್ಕೆ ಏನು ಬಾಯಿಬಿಡುತ್ತಾನೋ ಎನ್ನುವ ಭಯ ಇಡೀ ಆಫೀಸಿನ ಸಿಬ್ಬಂದಿಯನ್ನು ಕಂಗೆಡಿಸಿತ್ತು. ಆ ಭಯಕ್ಕೆ ಇಂಬು ಕೊಟ್ಟಂತೆ ಅಟೆಂಡರ್ ಸುಗುಣಾಬಾಯಿ ಎದುರು ನಿಂತು 'ಏನವಾ ನಿಮ್ಮ ಅತ್ತಿ ಎಂದ ಸಾಯ್ತಾಳಂತ ವಿಚಾರ ಮಾಡ್ಲಿಕತ್ತಿ ಏನು' ಎಂದು ಚಿದಂಬರ ನುಡಿದ ಗಂಟೆಯೊಳಗಾಗಿ ಕಾಕತಾಳೀಯ ಎನ್ನುವಂತೆ ಸುಗಣಾಬಾಯಿ ಮಗ ಬಂದು 'ಅವ್ವಾ ಅಜ್ಜಿ ಸತ್ತಾಳ, ನಿನಗ ಲಗೂನ ಮನೀಗಿ ಬಾ ಅಂತ ಅಪ್ಪ ಹೇಳಿ ಕಳಿಸ್ಯಾನ' ಎಂದು ಸುದ್ದಿ ಮುಟ್ಟಿಸಿದ್ದ.

ಗಂಡನ ಈ ವಾಸನೆಯ ಖಯಾಲಿಯಿಂದ ಪದ್ಮಾವತಿಗೆ ಭವಿಷ್ಯ ಅಂಧಕಾರದಲ್ಲಿ ಮುಳುಗಿದಂತಾಗಿ ನಿದ್ದೆ ಹತ್ತಿರ ಸುಳಿಯದೆ ಅವಳ ಮನಸ್ಸು ಒಂದುರೀತಿಯ ಕ್ಷೋಭೆಯಿಂದ ನರಳಿತು. ನಿನ್ನೆಯಷ್ಟೆ ಭೇಟಿಯಾಗಿದ್ದ ಮಾಧವಿ 'ಅಲ್ರೀ ವೈನಿ ಚಿದಂಬರಣ್ಣಗ ಸ್ವಲ್ಪ ತಿಳಿಸಿ ಹೇಳರಲಾ. ವಾಸನಿಯಿಂದ ಎಲ್ಲಿ ನಮ್ಮ ಮನಸಿನ್ಯಾಂದು ಏನು ಹೇಳ್ತಾರೋ ಅಂತ ಆಫೀಸಿನ್ಯಾಗ ಎಲ್ಲರಿಗೂ ಭಯ ಶುರು ಆಗ್ಯಾದ. ವಾಸನಿ ಗೊತ್ತಾಗಬಾರದಂತ ಸಾವಿರಗಟ್ಟಲೆ ರೊಕ್ಕ ಖರ್ಚುಮಾಡಿ ಮೈಮ್ಯಾಲ ಸೆಂಟ್ ಸುರುಕೊಂಡು ಆಫೀಸ್ ಕೆಲಸಕ್ಕ ಬರಲಿಕತ್ತಾರ. ಸುಗುಣಾಬಾಯಿ ಸಮಾಚಾರ ನಿಮಗ ಗೊತ್ತಾಗಿರಬೇಕಲ್ಲ. ನಿಮ್ಮ ಗಂಡ ನುಡಿದ ಒಂದು ತಾಸಿನೊಳಗ ಅವಳ ಅತ್ತಿ ನೆಗದು



ಬಿದ್ದಳು ನೋಡ್ರಿ. ಇದು ಹೀಗೆ ಮುಂದುವರೆದರ ನಾಳಿಗಿ ನೌಕರಿಗೆ ಕಂಟಕ ಬರತದ. ಸ್ವಲ್ಪ ವಿಚಾರ ಮಾಡ್ರಿ' ಎಂದು ಹೇಳಿ ಪದ್ಮಾವತಿಯ ದುಗುಡ ಮತ್ತಷ್ಟು ಹೆಚ್ಚಿಸಿದ್ದಳು. ರಾತ್ರಿಯೆಲ್ಲ ಯೋಚಿಸಿದವಳಿಗೆ ಶೇಷಗಿರಿ ಪುರೋಹಿತನನ್ನು ಚಿದಂಬರ ಭೇಟಿ ಮಾಡಿದರೆ ಸಮಸ್ಯೆಗೆ ಪರಿಹಾರ ಸಿಗಬಹುದೆಂಬ ಭರವಸೆ ಮನಸ್ಸಿನಲ್ಲಿ ಮೂಡಿದ್ದೆ ಅದನ್ನು ಮರುದಿನ